ಸದರೀ ದರಖಾಸ್ತುದಾರಳಾದ ಕೆಂಚಮ್ಮನ ಅರ್ಜಿಯನ್ನು 1887ನೇ ಇಸವಿ ಜುಲೈ ತಿಂಗಳು ತಾರೀಖು 8ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೇ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚಿನ್ನಪ್ಪನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1887ನೇ ಇಸವಿ ಜೂನ್ ತಿಂಗಳು 4ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

1887ನೇ ಇಸವಿ ಅರ್ಜೀ ನಂಬರ್ 381.

ಮೃತಪಟ್ಟ ಚಿಕ್ಕತಿರಂಗಳಪ್ಪನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಕೋಲಾರ ಡಿಸ್ಟ್ರಿಕ್ಟು ಕಸಬಾ ಬೌರಿಂಗ್‌ಪೇಟೇಯಲ್ಲಿರುವ ವೇಕಟಪ್ಪಿ ಕೊಂಡಪ್ಪ ಮೃತಪಟ್ಟ ಸದರೀ ಚಿಕ್ಕ ತಿರಂಗಳಪ್ಪನಿಗೆ ತಮ್ಮನಾಗಬೇಕೆಂಬ ಹಕ್ಕುದಾರಿ ಮೇಲೆ ಸದರೀ ಸ್ಥಳದ ಚಿಕ್ಕ ತಿರಂಗಳಪ್ಪ ನೆಂಬುವನು ಕೋಲಾರ ಡಿಸ್ಟ್ರಿಕ್ಟು ಬೌರಿಂಗ್‌ಪೇಟೇ ವಾಸಸ್ಥನಾಗಿ ಮೃತಪಟ್ಟ ಚಿಕ್ಕತಿರಂಗಳಪ್ಪನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಕೊಂಡಪ್ಪನ ಅರ್ಜಿಯನ್ನು 1887ನೇ ಇಸವಿ ಜುಲೈ ತಿಂಗಳು ತಾರೀಖು 1ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚಿಕ್ಕ ತಿರಂಗಳಪ್ಪನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1887ನೇ ಇಸವಿ ಮೇ ತಿಂಗಳು 30ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

1887ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 409.

ಮೃತಪಟ್ಟ ಪೂಜಾರಿ ವೀರಣ್ಣನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಬೆಂಗಳೂರು ಟವ್ನಿಗೆ ಕೀರಿದ ಲಾಲಬಾಗ್ ಮೂವಳ್ಳಿಯಲ್ಲಿರುವ ಯಂ. ರುದ್ರಪ್ಪ, ಮೃತಪಟ್ಟ ಸದರೀ ವೀರಣ್ಣನಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಡಿಟೋ ಸ್ಥಳದ ಯಂ. ರುದ್ರಪ್ಪನು ಮೂವಳ್ಳಿ ವಾಸಸ್ಥನಾಗಿ ಮೃತಪಟ್ಟ ವೀರಣ್ಣನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿಯಿರುತ್ತಾನೆ.

ಸದರೀ ದರಖಾಸ್ತುದಾರನಾದ ಯಂ. ರುದ್ರಪ್ಪನ ಅರ್ಜೀಯನ್ನು 1887ನೇ ಇಸವಿ ಜುಲೈ ತಿಂಗಳು ತಾರೀಖು 10ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೇ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೀರಣ್ಣನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಯಿಧೆ.

1887ನೇ ಇಸವಿ ಜೂನ್ ತಿಂಗಳು 4ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸಿ. ಕೈನ್ಸ್,
ಸಬ್ ಜಡ್ಜ್.

ತುಮಕೂರು ಡಿಸ್ಟ್ರಿಕ್ಟು.

ಇನ್ಸಿಹಾರ್‌ನಾಮೆ.

ತಾರೀಖು 2ನೇ ಮೇ 1887.

ಚಿಕ್ಕನಾಯಕನಹಳ್ಳಿ ಅಮಲ್‌ದಾರ್ ಕೆ. ಶ್ರೀಕಂಠಯ್ಯನವರು, 1887ನೇ ಮೇ 7ನೇ ಮಂಗಳವಾರ ಪೂರ್ವಾಹ್ನದಲ್ಲಿ ಹುಳಿಯಾರ ಸಬ್ ತಾಲ್ಲೂಕು ಛಾರ್ಜನ್ನು ಡೆಪ್ಯುಟಿ ಅಮಲ್‌ದಾರ್ ವಿ. ಸೀತಾರಾಮಯ್ಯನವರಿಂದ ವಹಿಸಿರುತ್ತಾರೆ.

ಪಿ. ಪಂಚನಾಥರಾವ್,
ಫೋರ್ ಡೆಪ್ಯುಟಿ ಕಮ್ಮಿಷನರ.